(ಭರತ್ ಮಹಾರಾಜ್) ಅವರ ವೈದ್ಯಕೀಯ ತಪಾಸಣೆಯೂ ಅಂದಿನ ರಾತ್ರಿಯೇ ನಡೆಯಬೇಕಾಗಿತ್ತು. ತಮ್ಮ ತಪಾಸಣೆಯು ಭರತ್ ಮಹಾರಾಜರ ತಪಾಸಣೆಯ ನಂತರ ನಡೆಯಲಿ ಎಂದು ಸ್ವಾಮಿ ಭೂತೇಶಾನಂದಜಿ ಅವರು ಹೇಳಿದರು. ಅದರಂತೆ ವೈದ್ಯರು ಭರತ್ ಮಹಾರಾಜರ ಹತ್ತಿರ ಹೋದರು. ರಾತ್ರಿ ೧೦ ಗಂಟೆಯಾಯಿತು. ಸ್ವಾಮೀಜಿಯವರು ಒಂದು ಸೋಫಾ ಮೇಲೆ ಕುಳಿತುಕೊಂಡು ವೈದ್ಯರು ಬರುವುದನ್ನೇ ಕಾಯುತ್ತಿದ್ದರು. ಇದನ್ನು ಕಂಡ ಅವರ ಸೇವಕರು, "ಮಹಾರಾಜ್, ನೀವು ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ, ವೈದ್ಯರು ಬಂದಾಗ ನಿಮಗೆ ತಿಳಿಸುತ್ತೇವೆ" ಎಂದು ಹೇಳಿದರು. ಅದಕ್ಕೆ ಸ್ವಾಮೀಜಿ ಏನೂ ಪ್ರತಿಕ್ರಿಯೆ ನೀಡಲಿಲ್ಲ. ಅದಕ್ಕೆ ಬದಲಾಗಿ ವೈದ್ಯರಿಗೆ ಊಟದ ವ್ಯವಸ್ಥೆ ಆಗಿದೆಯಲ್ಲವೇ ಎಂದು ವಿಚಾರಿಸಿದರು. "ಈಗಾಗಲೇ ಬಹಳ ಹೊತ್ತಾಗಿದೆ. ಮೊದಲು ವೈದ್ಯರು ಪ್ರಸಾದವನ್ನು ತೆಗೆದುಕೊಳ್ಳಲಿ. ಅನಂತರ ಇಲ್ಲಿಗೆ ಬಂದರೆ ಸರಿ" ಎಂದು ಹೇಳಿದರು.

ರಾತ್ರಿ ೧೦.೩೦ಕ್ಕೆ ಭರತ್ ಮಹಾರಾಜ್ ಅವರ ವೈದ್ಯಕೀಯ ತಪಾಸಣೆ ಮುಗಿಯಿತು. ವೈದ್ಯರು ಅನಂತರ ಪ್ರಸಾದವನ್ನು ಸ್ವೀಕರಿಸಿ, ಸ್ವಾಮಿ ಭೂತೇಶಾನಂದಜಿ ಅವರ ಬಳಿ ಬಂದಾಗ ರಾತ್ರಿ ೧೧ ಗಂಟೆ! ಸ್ವಾಮೀಜಿಯವರ ವೈದ್ಯಕೀಯ ತಪಾಸಣೆ ಮುಗಿಯುವ ಹೊತ್ತಿಗೆ ರಾತ್ರಿ ೧೨ ಗಂಟೆ!

ತಮ್ಮಿಂದ ಬೇರೆಯವರಿಗೆ ಅನಾನುಕೂಲವಾಗದಿರುವಂತೆ ಸ್ವಾಮಿ ಭೂತೇಶಾನಂದಜಿ ಸದಾ ಜಾಗೃತರಾಗಿದ್ದರು. ಸ್ವಾಮೀಜಿಯವರ ಪ್ರತಿಯೊಂದು ಚಲನವಲನದಲ್ಲಿಯೂ ಇದನ್ನು ನಾವು ಗುರುತಿಸಬಹುದಿತ್ತು.

ಸ್ವಾಮಿ ಭೂತೇಶಾನಂದಜಿಯವರ ಜೀವನದಲ್ಲಿ ನಾವು ಕಾಣಬಹುದಾದ ಇನ್ನೊಂದು ಅಪೂರ್ವ ಗುಣವೆಂದರೆ, ಹೊಂದಾಣಿಕೆ. ಅವರು ಎಲ್ಲರ ಜೊತೆಯಲ್ಲಿ ಸಹಜವಾಗಿ ಹೊಂದಿಕೊಂಡು ಹೋಗುತ್ತಿದ್ದರು. ಕೆಲವೊಮ್ಮೆ ಅವರ ಮೌನವನ್ನು ನೋಡಿ, ಕೆಲವರು ತಪ್ಪು ತಿಳಿದುಕೊಳ್ಳುವುದಕ್ಕೂ ಆಸ್ಪದವಿತ್ತು. ಸ್ವಾಮಿ ಋತಾನಂದರ ಹತ್ತಿರ ವೈಯಕ್ತಿಕ ಮಾತುಕತೆಯಲ್ಲಿ ಅವರು ಹೀಗೆ ಹೇಳಿದ್ದರು: "ಹಿರಿಯರೇನಾದರೂ ಅಹಿತವಾದ ರೀತಿಯಲ್ಲಿ ವರ್ತಿಸಿದರೆ, ಸಾಮಾನ್ಯವಾಗಿ ನಾನು ಮೌನವನ್ನೇ ತಾಳುತ್ತಿದ್ದೆ. ಸಮವಯಸ್ಕರು ಅಥವಾ ಕಿರಿಯರು ತಪ್ಪಾಗಿ ನಡೆದುಕೊಂಡಾಗ ಮಾತ್ರವೇ ಅವರಿಗೆ ಬುದ್ಧಿಮಾತುಗಳನ್ನು ಹೇಳುತ್ತಿದ್ದೆ. ನಾನು ಹೇಳಿದ ಮೇಲೆಯೂ ಅವರ ನಡವಳಿಕೆಯಲ್ಲಿ ಸುಧಾರಣೆ ಕಾಣದಿದ್ದರೆ, ಮತ್ತೆ ಅವರಿಗೆ ತಿಳಿಹೇಳುತ್ತಿರಲಿಲ್ಲ. ಒತ್ತಾಯವಿಲ್ಲದೆ, ವೈಯಕ್ತಿಕವಾಗಿ ನನ್ನ ಸೋಲನ್ನು ಮನಸ್ಸಿನಲ್ಲಿಯೇ ಒಪ್ಪಿಕೊಳ್ಳುತ್ತಿದ್ದೆ. ಈ ರೀತಿಯ ಸೋಲು ನಿಜವಾಗಿಯೂ ಸೋಲಲ್ಲ; ಇದು ನಮ್ಮ ಜಯ."

ಈಗ ನಮ್ಮ ಮನಸ್ಸಿನಲ್ಲಿ, "ಇದು ಹೇಗೆ ಸಾಧ್ಯ?" ಎಂಬ ಪ್ರಶ್ನೆ ಏಳಬಹುದು. ಇಲ್ಲಿ ನಾವು ಗಮನಿಸಬೇಕಾದ ವಿಷಯವೆಂದರೆ, ಸ್ವಾಮೀಜಿಯವರು ತಮ್ಮ ಸುದೀರ್ಘ ಸೇವಾಜೀವನದ ಅವಧಿಯಲ್ಲಿ ಬಹಳ ಜನರ ಜೊತೆಗೆ ಒಡನಾಡಿ, ಅನೇಕ ರೀತಿಯ ಕೆಲಸಕಾರ್ಯಗಳನ್ನು ಮಾಡಿದವರು. ಇಂತಹ ಅಪಾರ ಅನುಭವ ಉಳ್ಳ ಹಿರಿಯರ ಮಾತಿನ ಬೆಲೆಯೇ ಬೇರೆ, ಅಲ್ಲವೇ?

**ಮೃದು ವಚನವೇ ಸಕಲ ತಪಂಗಳಯ್ಯ** ಎಂಬ ಬಸವಣ್ಣನವರ ಮಾತನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು. ಎಲ್ಲ ಸಮಯದಲ್ಲಿಯೂ ನಾವು ಮೃದುವಾಗಿಯೇ ವರ್ತಿಸಬೇಕೇ, ಅದು ಸಾಧ್ಯವೇ? ಇತರರು ಕೆಲಸ ಮಾಡುವುದರಲ್ಲಿ ಪರಿವರ್ತನೆಯನ್ನು ತರಬೇಕಾದರೂ ಅಂತಹ ವರ್ತನೆ ಸಾಧುವೇ? ಎಂಬ ಪ್ರಶ್ನೆಗಳು ನಮ್ಮಲ್ಲಿ ಏಳುವುದು ಸಹಜ. ಈ ವಿಷಯದಲ್ಲಿ ಸ್ವಾಮಿ ಭೂತೇಶಾನಂದಜಿಯವರ ಜೀವನದಲ್ಲಿ ನಡೆದ ಮತ್ತೆರಡು ಘಟನೆಗಳನ್ನು ನೋಡೋಣ, ಬನ್ನಿ.

ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದಾಗ, ಒಂದು ಶಾಖಾಕೇಂದ್ರಕ್ಕೆ ಭೇಟಿಕೊಟ್ಟಿದ್ದರು. ಅಲ್ಲಿ ಒಂದು ಕಡೆ ಬಹಳ ಕಳೆ ಬೆಳೆದಿತ್ತು. ಆ ಕೇಂದ್ರದಲ್ಲಿದ್ದ ಸಾಧುಗಳೊಡನೆ ಮಾತನಾಡುತ್ತ, ಅವರು ಹೀಗೆ ಹೇಳಿದರು: "ನಿಮಗೆ ಈ ಕೇಂದ್ರದ ನಿರ್ವಹಣೆಯನ್ನು ಯೋಗ್ಯವಾದ ರೀತಿಯಲ್ಲಿ ನಡೆಸಿಕೊಂಡು ಹೋಗಲು ಸ್ವಲ್ಪ ಕಷ್ಟವಾಗುತ್ತಿದೆ ಎಂದು ನನಗೆ ತೋರುತ್ತಿದೆ." "ನೀವು ಈ ಕೇಂದ್ರದ ನಿರ್ವಹಣೆಯನ್ನು ಸರಿಯಾಗಿ ನಡೆಸುತ್ತಿಲ್ಲ" ಎಂದು ಅವರು ನೇರವಾಗಿ ನಿಂದಿಸಲಿಲ್ಲ. ಸ್ವಾಮಿ ಭೂತೇಶಾನಂದಜಿ ಅವರೇ ಹೇಳುತ್ತಿದ್ದಂತೆ, "ಅಪ್ಪಣೆ ಮಾಡಬೇಕಾದರೆ, ಗಟ್ಟಿಯಾಗಿ ಕಿರುಚಾಡಬೇಕಾಗಿಲ್ಲ."

ಒಮ್ಮೆ ಸ್ವಾಮೀಜಿಯವರು ತಾವು ಹಿಂದೆ ಕಾಲ ಕಳೆದ ರಾಜ್‌ಕೋಟ್ ಆಶ್ರಮಕ್ಕೆ ಭೇಟಿಕೊಟ್ಟಿದ್ದರು. ಅಲ್ಲಿನ ತೋಟದಲ್ಲಿ ಅವರು ಅಡ್ಡಾಡುತ್ತಿದ್ದಾಗ, ಅಲ್ಲಿ ಇರಿಸಿದ್ದ ಸೂಚನಾಫಲಕಗಳು ಅವರ ಕಣ್ಣಿಗೆ ಬಿದ್ದವು. ಅದರಲ್ಲಿ ಒಂದು ಹೀಗಿತ್ತು: 'ಹೂವುಗಳನ್ನು ಕೀಳುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.' ಸ್ವಾಮೀಜಿಯವರು ಅನಂತರ ಸಂಬಂಧಪಟ್ಟವರ ಜೊತೆಗೆ ಮಾತನಾಡುತ್ತ ಬಹಳ ಮೃದುವಾಗಿ ಹೀಗೆ ಹೇಳಿದರು: "ನೋಡು, ನಮ್ಮ ಆಶ್ರಮಗಳಿಗೆ ಬರುವವರೆಲ್ಲರೂ ಒಳ್ಳೆಯ ಜನ. ಆದ್ದರಿಂದ, 'ಹೂವನ್ನು ಕೀಳಬೇಡಿ' ಎಂದು ಬರೆದರೆ ಸಾಲದೆ?' " ಕಟುವಚನಗಳನ್ನು ಉಪಯೋಗಿಸುವುದು ಸ್ವಾಮಿ ಭೂತೇಶಾನಂದಜಿ ಅವರ ಸ್ವಭಾವಕ್ಕೆ ವಿರುದ್ಧವಾಗಿತ್ತು. ಯಾರೇ ಆಗಲಿ, ಅವರ ಮನಸ್ಸನ್ನು ಕಿಂಚಿತ್ತೂ ನೋಯಿಸಬಾರದೆಂಬ ದೊಡ್ಡ ಗುಣವನ್ನು ಸ್ವಾಮೀಜಿಯವರಲ್ಲಿ ಕಾಣಬಹುದು. **ಮಾರ್ದವಂ** – ಮೃದುವಾಗಿರುವಿಕೆ ಎಂದು ಈ ಗುಣದ ಬಗ್ಗೆ ಭಗವದ್ಗೀತೆ ಹೇಳುತ್ತದೆ. ನಯ, ವಿನಯಗಳು ಈ ಸಾತ್ವಿಕ ಸ್ವಭಾವಕ್ಕೆ ಸೇರಿದವು. ಈ ಗುಣದ ಪ್ರತ್ಯಕ್ಷ ನಿದರ್ಶನವನ್ನು ಸ್ವಾಮಿ ಭೂತೇಶಾನಂದಜಿಯವರ ನಡವಳಿಕೆಯಲ್ಲಿ ನಾವು ಕಾಣಬಹುದು.

ಸ್ವಾಮೀಜಿಯವರ ಬಳಿಗೆ ಹೋದವರೆಲ್ಲರೂ ಅವರು ತೋರುತ್ತಿದ್ದ ನಿಸ್ವಾರ್ಥ ಪ್ರೀತಿಯನ್ನು ಆಸ್ವಾದಿಸಬಹುದಾಗಿತ್ತು. ಅವರ ಸೇವಕರಾಗಿದ್ದ ಸ್ವಾಮಿ ಸರ್ವಭೂತಾನಂದಜಿ ಅವರು ಹೀಗೆ ಬರೆಯುತ್ತಾರೆ: "ಅಂದು ನಾನು ಯೋಗೋದ್ಯಾನ ಆಶ್ರಮಕ್ಕೆ ಸೇರಿಕೊಂಡ ದಿನ. ಅವತ್ತು ಮಧ್ಯಾಹ್ನ ಊಟದ ಗಂಟೆ ಬಾರಿಸಿತು. ನಾನು ಎಲ್ಲರ ಜೊತೆಗೆ ಭೋಜನಾಲಯಕ್ಕೆ ಹೋದೆ. ಸ್ವಾಮಿ ಭೂತೇಶಾನಂದಜಿ ಅವರು ಕೂಡ ಒಂದು ಸ್ಟೂಲಿನ ಮೇಲೆ ಕುಳಿತುಕೊಂಡರು. ನಾನು ಊಟ ಮಾಡುತ್ತಿದ್ದಾಗ ಅವರ ಗಮನ ನನ್ನ ಮೇಲೆಯೇ ಇತ್ತು. ಇದಕ್ಕೆ ಕಾರಣ ನಾನು ಹೊಸದಾಗಿ